# ಹೆಂಗಳೆಯರ ಎಲ್ಲಾ ಆರೋಗ್ಯ ಸಮಸ್ಯೆಗಳಿಗೆ ಇಲ್ಲಿದೆ ಉತ್ತರ–ಕೇಳೇ ಗೆಳತಿ

ವ್ಯಕ್ತಿಯೊಬ್ಬ ಆಸ್ಪತ್ರೆಯಲ್ಲಿ ಕೈ ಕೈ ಹಿಸುಕುತ್ತಾ ಅತ್ತಿಂದಿತ್ತ ಓಡಾಡುತ್ತಿದ್ದಾನೆ. **ಅತಿ ಸೂಕ್ಷ್ಮ ಹೆರಿಗೆ**ಗೆಂದು ದಾಖಲಾದ ಪತ್ನಿಯ ಬಗ್ಗೆ ಆತಂಕಗೊಂಡು ಸಿಕ್ಕವರ ಮೇಲೆಲ್ಲಾ ಹರಿಹಾಯುತ್ತಿದ್ದಾನೆ. ದಾಖಲಾತಿ ಮಾಡಿಕೊಂಡ ವೈದ್ಯರು ಬರುತ್ತಿಲ್ಲ, ಸ್ಕ್ಯಾನಿಂಗ್ ಮಾಡುವ ವೈದ್ಯರು ಯಾರೆಂದು ತಿಳಿದಿಲ್ಲ. ಹೆರಿಗೆ ಮಾಡಿಸುವ ವೈದ್ಯರು ಒಮ್ಮೆಯೂ ಬಂದಿಲ್ಲ. ಮನಸ್ಸಿನಲ್ಲಿ ದುಗುಡ ಹೆಚ್ಚುತ್ತಿದೆ. ಈ ದೃಶ್ಯ ಹೆಚ್ಚಿನ ಹೆರಿಗೆ ಆಸ್ಪತ್ರೆಗಳಲ್ಲಿ ಇಂದಿಗೂ ಸಾಮಾನ್ಯ.

ಎಲ್ಲರೂ ಹೆರಿಗೆ ಸಮಯದಲ್ಲಿ ತಾಯಿ–ಮಗುವಿನ ಸುರಕ್ಷತೆಗಾಗಿ ವೈದ್ಯರ ಸಲಹೆಯನ್ನೇನೋ ಪಡೆಯಬಯಸುತ್ತಾರೆ. ಇಷ್ಟಾದರೂ ಈ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು, ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಸಮಸ್ಯೆಗಳ ಬಗ್ಗೆ ಹೆಚ್ಚಿನವರಿಗೆ ಇನ್ನೂ ತಿಳಿದಿಲ್ಲ. ಲಭ್ಯವಿರುವ ಆಧುನಿಕ ಚಿಕಿತ್ಸೆಗಳಂತೂ ಇನ್ನೂ ನಿಗೂಢವಾಗಿಯೇ ಉಳಿದಿವೆ. ಒಂದೊಂದು ಚಿಕಿತ್ಸೆಗೆ ಒಂದೊಂದು ಆಸ್ಪತ್ರೆಗೆ ಅಲೆದಾಟ, ಗರ್ಭಿಣಿಯರಿಗೆ ಚಿಕಿತ್ಸೆ ನೀಡುವ ಮತ್ತು ಹೆರಿಗೆ ಮಾಡಿಸುವ ವೈದ್ಯರು ಬೇರೆಬೇರೆಯಾಗಿರುವುದು ಹೀಗೆ ಕಾರಣಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಹೀಗೆ ನಿಗೂಢವಾಗಿ ಉಳಿದಿರುವ ಚಿಕಿತ್ಸೆಗಳಲ್ಲಿ ಲ್ಯಾಪರೋಸ್ಕೋಪಿಯೂ ಒಂದು. ಭಾರತದಲ್ಲಿ ಇದನ್ನು ಪರಿಚಯಿಸಿ 70–80 ವರ್ಷಗಳಾಗಿವೆ. ನೂರಕ್ಕೆ ನೂರು ಪಿತ್ತಕೋಶದ ಶಸ್ತ್ರಚಿಕಿತ್ಸೆಗಳು ಲ್ಯಾಪರೋಸ್ಕೋಪಿಯ ಮೂಲಕವೇ ನಡೆಯುತ್ತವೆ. ನೋವಿನ ವಿಷಯವೆಂದರೆ ಮಹಿಳೆಯರ ಗರ್ಭಕೋಶ ಸಂಬಂಧ ಶಸ್ತ್ರಚಿಕಿತ್ಸೆಗಳಲ್ಲಿ ಕೇವಲ 25% ಮಾತ್ರ ಲ್ಯಾಪರೋಸ್ಕೋಪಿಯ ಮೂಲಕ ನಡೆಯುತ್ತವೆ. ಅಂದರೆ ಕೇವಲ 25% ಜನರಿಗೆ ಮಾತ್ರ ಲ್ಯಾಪರೋಸ್ಕೋಪಿಯ ಬಗ್ಗೆ ತಿಳಿದಿದೆ. ಉಳಿದ 75% ಜನರಿಗೆ ಈ ಚಿಕಿತ್ಸೆಯ ಬಗ್ಗೆ ತಿಳಿದಿಲ್ಲ ಅಥವಾ ತಪ್ಪು ಕಲ್ಪನೆಗಳಿವೆ.

ಮಹಿಳೆಯರಿಗೆ ಆರೋಗ್ಯದ ವಿಷಯದಲ್ಲಿ, ವಿಶೇಷವಾಗಿ ಹೆರಿಗೆಯಂತಹ ಅಪರೂಪದ ಸನ್ನಿವೇಶದಲ್ಲಿ ಕಾಡುವ ಹಲವು ಪ್ರಶ್ನೆಗಳಿಗೆ ಉತ್ತರ ನೀಡಬಲ್ಲ, ಮಹಿಳೆಯರ ಎಲ್ಲಾ ಬಗೆಯ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಚಿಕಿತ್ಸೆ ನೀಡುವ ಪರಿಪೂರ್ಣ ಮಹಿಳಾ ವೈದ್ಯರ ಅಗತ್ಯವಿದೆ. ಇಂತಹ ಕೆಲವರಲ್ಲಿ, ಯೂ ಟ್ಯೂಬ್ ಚಾನೆಲ್ನಲ್ಲಿ ತಮ್ಮ 'ಕೇಳೇ ಗೆಳತಿ' ಕಾರ್ಯಕ್ರಮದ ಮೂಲಕ ಜನಪ್ರಿಯರಾಗಿರುವ ಮಹಿಳಾ ವೈದ್ಯೆ ಡಾ. ಉಷಾ.ಬಿ.ಆರ್ ಒಬ್ಬರು. ಇವರು ಈಗಾಗಲೇ ತಮ್ಮ 5–8 ನಿಮಿಷಗಳ ವೀಡಿಯೋ ತುಣುಕುಗಳ ಮೂಲಕ ಮಹಿಳೆಯರಿಗೆ ಉಪಯುಕ್ತ ಮಾಹಿತಿ ಒದಗಿಸಲು ಯಶಸ್ವಿಯಾಗಿದ್ದಾರೆ.

ವೈದ್ಯಕೀಯ ಕ್ಷೇತ್ರದಲ್ಲಿ ಹತ್ತಾರು ವರ್ಷಗಳ ಅನುಭವ ಹೊಂದಿರುವ ಡಾ. ಉಷಾ.ಬಿ.ಆರ್ (MBBS.MS.DNB. DRM Ex - Sr AIIMS DELHI) ವಿವಿಧ ಬಗೆಯ ಲ್ಯಾಪರೋಸ್ಕೋಪಿ ಶಸ್ತ್ರಚಿಕಿತ್ಸೆಗಳು, ಫರ್ಟಿಲಿಟಿ (ಐವಿಎಫ್, ಐಯುಐ, ಸರೊಗಸಿ), ಅತಿ ಸೂಕ್ಷ್ಮ ಹೆರಿಗೆ ಮತ್ತು ಸ್ಕ್ಯಾನಿಂಗ್ ವಿಧಾನಗಳಲ್ಲಿ ನೈಪುಣ್ಯತೆ ಪಡೆದುಕೊಂಡಿದ್ದಾರೆ. ಹದಿ ಹರೆಯದ ಹೆಣ್ಣು ಮಕ್ಕಳಿಂದ ಹಿಡಿದು ವಯಸ್ಕರು ಮತ್ತು ಮುಟ್ಟುನಿಂತ ಮಹಿಳೆಯರಿಗೂ ಸಹ ಎಲ್ಲಾ ವಿಧವಾದ ಚಿಕಿತ್ಸೆಗಳಿಗೆ ಸ್ಪಂದಿಸುವ ಮೂಲಕ 'ಪರಿಪೂರ್ಣ ವೈದ್ಯೆ' ಎನಿಸಿಕೊಂಡಿದ್ದಾರೆ. ಹೆಣ್ಣುಮಕ್ಕಳ ದೇಹಸ್ಥಿತಿ ಮತ್ತು ಮನಃಸ್ಥಿತಿಯನ್ನು ಅರಿತು ಸಲಹೆ ಮತ್ತು ಚಿಕಿತ್ಸೆ ನೀಡುವುದು ಇವರ ವೈಶಿಷ್ಟ್ಯತೆ.

"ಪ್ರತಿಯೊಬ್ಬ ಹೆಣ್ಣಿಗೂ ತಾಯಿಯಾಗುವ ಮತ್ತು ತನ್ನ ಮಗುವನ್ನು ಹೆರುವ ಹಕ್ಕಿದೆ. ಅದು ನೈಸರ್ಗಿಕ ಗರ್ಭಧಾರಣೆಯಿಂದಲೂ ಸಾಧ್ಯ ಅಥವಾ (ಎಆರ್‌ಟಿ) ಅಸಿಸ್ಟಡ್ ರಿಪ್ರೊಡಕ್ಷನ್ನಿಂದಲೂ ತನ್ನದೇ ಮಗುವನ್ನು ಹೆರುವ ಮತ್ತು ಪ್ರೀತಿಯಿಂದ ಮಡಿಲನ್ನು ತುಂಬಿಕೊಳ್ಳಲು ಸಾಧ್ಯವಿದೆ," ಎನ್ನುತ್ತಾರೆ ಡಾ. ಉಷಾ.ಬಿ. ನೂರಾರು ಗೆಳತಿಯರು ದೇಶದ ನಾನಾ ಭಾಗಗಳಿಂದ ಲ್ಯಾಪರೊಸ್ಕೋಪಿ ಮತ್ತು ಐವಿಎಫ್ ಗೆಂದು ಇವರಿಗೆ ಕರೆ ಮಾಡಿ ತಮ್ಮ ಗರ್ಭಧಾರಣೆಯ ಕನಸನ್ನು ನನಸಾಗಿಸಿಕೊಂಡಿದ್ದಾರೆ.

**ಕೇಳೇ ಗೆಳತಿಯಲ್ಲಿ (YouTube) ವೈರಲ್ ಆದ ವೀಡಿಯೋಗಳು:** ಮಹಿಳೆಯರಲ್ಲಿ ಸಂತಾನಪ್ರಾಪ್ತಿ, ಅಧಿಕ ರಕ್ತ ಸ್ರಾವ, ಗರ್ಭಧಾರಣೆಯ ಸಮಸ್ಯೆಗಳು, ಗರ್ಭಿಣಿಯರ ಆರೈಕೆ, ಹದಿಹರೆಯದ ಹೆಣ್ಣು ಮಕ್ಕಳ ಆರೈಕೆ, ಕೋವಿಡ್ ಮತ್ತು ಹೆರಿಗೆ, ಕೋವಿಡ್ ಆರಂಭದಲ್ಲಿ ಮಹಿಳೆಯರ ಆರೈಕೆ ಹೇಗೆ?, ಐವಿಎಫ್, ಬಂಜೆತನ ನಿವಾರಣೆಗೆ ಹೇಗೆ?, ಮಹಿಳೆಯರಲ್ಲಿ ಲ್ಯಾಪರೊಸ್ಕೋಪಿ?, ಅತಿ ಸೂಕ್ಷ್ಮ ಹೆರಿಗೆ?, Ectopic pregnancy (ಅಪಸ್ಥಾನಿಯ ಗರ್ಭಧಾರಣೆ, ರಕ್ತ ಹೀನತೆ, ಪಿಸಿಓಎಸ್, ಮೂತ್ರದ ಸೋಂಕು, ಮಕ್ಕಳಾಗಲು ಪ್ರಯತ್ನ ಯಾವಾಗ? ಮುಂತಾದವುಗಳು ಸಾಕಷ್ಟು ಜನಪ್ರಿಯವಾಗಿವೆ.



## ಮುಂಬರುವ ವೀಡಿಯೋಗಳು

**ಅಂತರರಾಷ್ಟ್ರೀಯ ಯೋಗಾಪಟುಗಳಾದ, ಕೆಂಪೇಗೌಡ ಪ್ರಶಸ್ತಿ ವಿಜೇತ ಶ್ರೀ ವಿಜಯ ರಘುನಾಥ್ ಹಾಗೂ ಶ್ರೀಮತಿ ಲಲಿತಾ ರಘು ರವರು ಮಹಿಳೆಯರು ಹಾಗೂ ಗರ್ಭಿಣಿಯರು ಮಾಡಬಹುದಾದ ಯೋಗ, ವ್ಯಾಯಾಮ ಮತ್ತು ಅವುಗಳಿಂದ ಆಗುವ ಉಪಯೋಗಗಳ ಬಗ್ಗೆ ಬಹಳ ಪ್ರೀತಿಯಿಂದ ಸರಳ ಆಸನಗಳನ್ನು ತೋರಿಸಿಕೊಟ್ಟಿದ್ದಾರೆ. ತಪ್ಪದೇ ಯೂ ಟ್ಯೂಬ್‌ನಲ್ಲಿ ಕೇಳೇ ಗೆಳತಿ ವೀಡಿಯೋಗಳನ್ನು ನೋಡಿ, ನಿಮ್ಮ ದೇಹ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಿ.**

**ವೀಕ್ಷಕರೇ, ಕೇಳೇ ಗೆಳತಿ ಕಾರ್ಯಕ್ರಮ ನೋಡಲು, ಯೂ ಟ್ಯೂಬ್‌ನಲ್ಲಿ Usha Specialty Clinic ಎಂದು ಸರ್ಚ್ ಮಾಡಿ. ಚಾನೆಲ್ ಸಬ್‌ಸ್ಕ್ರೈಬ್ ಮಾಡಿ, ನಿಮ್ಮ ಇಷ್ಟದ ಕಾರ್ಯಕ್ರಮದ ನೋಟಿಫಿಕೇಷನ್ ಪಡೆಯಬಹುದು.**